ಮೂಲ ದಾವಾ ಸಂಖ್ಯೆ. 52/2020 ಪಿ ಡಬ್ಲ್ಯೂ 1

(ದಿನಾಂಕ 08-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಮುಂದುವರೆದ ಪಾಟೀ ಸವಾಲುಃ 10 ನೇ ಪ್ರತಿವಾದಿ ಪರ ಶ್ರೀ ಬಿ ಬಿ ಆರ್ ವಕೀಲರಿಂದಃ-

ಮ್ಯುಟೇಶನ್ ಮಾಡಿಕೊಡಲು ನಾನು ನನ್ನ ಸಹೋದರರಿಗೆ ಕರೆದಿರುತ್ತೇನೆ. ನಾನು ಅವರಿಗೆ ಮೌಖಿಕವಾಗಿ ಕರೆದಿರುತ್ತೇನೆ. ಪಾಲುವಿಭಾಗ ಪತ್ರದಂತೆ ನಮ್ಮ ನಮ್ಮ ಹೆಸರುಗಳಿಗೆ ಕಂದಾಯ ದಾಖಲೆಗಳನ್ನು ಮಾಡಿಕೊಳ್ಳೋಣ ಅಂತಾ ನಾನು ನನ್ನ ಸಹೋದರರಿಗೆ ಕೇಳಿರುತ್ತೇನೆ. ನಾವು ಮಾಡಿಕೊಂಡ ಪಾಲುವಿಭಾಗದಂತೆ ಹಕ್ಕು ಬದಲಾವಣೆಯನ್ನು ಮಾಡಿಕೊಳ್ಳಲು ನನ್ನದು ಯಾವುದೇ ತಕರಾರು ಇರುವುದಿಲ್ಲ ಆದರೆ ಅವರು ಹಕ್ಕು ಬದಲಾವಣೆ ಮಾಡಿಕೊಳ್ಳಲು ಬಂದಿಲ್ಲವಾದ್ದರಿಂದ ನಾನು ಈ ದಾವೆಯನ್ನು ದಾಖಲಿಸಿದ್ದೇನೆ.

ದುರ್ಗೀಬಾಯಿ ನನಗೆ ಅಕ್ಕನಾಗಬೇಕು, ನಾನು ಸದರಿಯವರ ಮಗಳನ್ನು ಮದುವೆಯಾಗಿರುತ್ತೇನೆ. ನಾನು 8 ನೇ ಪ್ರತಿವಾದಿಯ ಮಗಳನ್ನು ವಿವಾಹ ಮಾಡಿಕೊಂಡಿರುವುದರಿಂದ ದಾವಾಸ್ತಿಗಳಲ್ಲಿ 8 ನೇ ಪ್ರತಿವಾದಿಗೂ ಸಹಾ ಒಂದು ಭಾಗ ಹೋದರೆ ನನಗೆ ಅನುಕೂಲವಾಗುತ್ತದಂತಾ ಹೇಳಿ ನಾನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇನೆಂದರೆ ಸರಿಯಲ್ಲ. 8 ನೇ ಪ್ರತಿವಾದಿಗೆ ವಿವಾಹದ ಸಮಯದಲ್ಲಿ ನನ್ನ ತಂದೆ ಮತ್ತು ನನ್ನ ಸಹೋದರರು ಸೇರಿ 10 ತೊಲೆ ಬಂಗಾರವನ್ನು ಉಡುಗೊರೆಯಾಗಿ ಕೊಟ್ಟಿರುತ್ತಾರೆನ್ನುವ ವಿಚಾರ ನಿಮಗೆ ಗೊತ್ತಾ ಎಂದರೆ ಇಲ್ಲ. ಆ ವಿಚಾರ ನನಗೆ ಗೊತ್ತಿದ್ದರೂ ಸಹಾ ಈ ದಾವೆಗೆ ಅನುಕೂಲವಾಗಬೇಕು ಅಂತಾ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿಮ್ಮ ತಂದೆಯ ಜೀವಿತಾವಧಿಯಲ್ಲಿ ನಿಮ್ಮ ಸಹೋದರಿಗೆ ಬಂಗಾರವನ್ನು ಕೊಟ್ಟಿದ್ದನ್ನು ಸೇರಿಸಿ ನಾವು ಸಹೋದರರೆಲ್ಲರೂ ಮಾಡಿಕೊಂಡ ವಿಭಾಗದಂತೆ ಖಾತೆ ಮಾಡಿಕೊಳ್ಳಲು ಯಾವುದೇ ತೊಂದರೆ ಇಲ್ಲವೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ಮೌಖಿಕವಾಗಿ ವಿಭಾಗ ಮಾಡಿಕೊಂಡಿದ್ದೇವೆನ್ನುತ್ತಾರೆ.

ದಾವಾ 5 ನೇ ಆಸ್ತಿ ಸರ್ವೆ ನಂ. 114, 8.84 ಎಕರೆ ಜಮೀನಿನಲ್ಲಿ 10 ನೇ ಪ್ರತಿವಾದಿಯು ಈಗ ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನಾವೆಲ್ಲರೂ ಸ್ವಾಧೀನದಲ್ಲಿರುತ್ತೇವೆನ್ನುತ್ತಾರೆ. ಸದರಿ ಜಮೀನಿನಲ್ಲಿ 10 ನೇ ಪ್ರತಿವಾದಿಯು 2 ಪಂಪ್ ಸೆಟ್ಟನ್ನು ಹಾಕಿಸಿರುತ್ತಾರೆಂದರೆ ಸಾಕ್ಷಿಯು ಎಲ್ಲರೂ ಸೇರಿ ಪಂಪ್ ಸೆಟ್ಟನ್ನು ಹಾಕಿಸಿರುತ್ತೇವೆನ್ನುತ್ತಾರೆ. ಸದರಿ ಆಸ್ತಿಯಲ್ಲಿ 10 ನೇ ಪ್ರತಿವಾದಿಯು ರೇಷ್ಮೆ ಬೆಳೆ ಬೆಳೆಯುತ್ತಿದ್ದಾನೆಂದರೆ ಸರಿ ಸಾಕ್ಷಿ ಮುಂದುವರೆದು

ಅದರಲ್ಲಿ ಎಲ್ಲರಿಗೂ ಹಕ್ಕು ಇದೆ ಎನ್ನುತ್ತಾರೆ. ಸದರಿ ಜಮೀನಿನಲ್ಲಿ 10 ನೇ ಪ್ರತಿವಾದಿಯು ಒಂದು ಮನೆ ಕಟ್ಟಿಕೊಂಡಿರುತ್ತಾರೆಂದರೆ ಸುಳ್ಳು ಅಲ್ಲಿ ಮನೆ ಕಟ್ಟಿಕೊಂಡಿದ್ದರೂ ಸಹಾ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿರುವ ಮನೆಗೆ ಸಂಬಂಧಿಸಿದಂತೆ ತೆರಿಗೆ ಮತ್ತು ವಿದ್ಯುತ್ ಶುಲ್ಕವನ್ನು 10 ನೇ ಪ್ರತಿವಾದಿ ಪಾವತಿಸುತ್ತಾ 10 ನೇ ಪ್ರತಿವಾದಿಯೇ ಅದರ ಸ್ವಾಧೀನದಲ್ಲಿರುತ್ತಾನೆಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ 96 ತೆಂಗಿನ ಮರಗಳನ್ನು 10 ನೇ ಪ್ರತಿವಾದಿಯು ಬೆಳೆದಿರುತ್ತಾನೆಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು 10 ನೇ ಪ್ರತಿವಾದಿಯು ಅದರಲ್ಲಿ 56 ತೆಂಗಿನ ಮರಗಳನ್ನು ಬೆಳೆದಿರುತ್ತಾನೆ ಎನ್ನುತ್ತಾರೆ. ದಾವಾ 4 ನೇ ಆಸ್ತಿ ಸರ್ವೆ ನಂ.116/ಎ, 8.10 ಎಕರೆ ಜಮೀನಿನಲ್ಲಿ 10 ನೇ ಪ್ರತಿವಾದಿ ಸ್ವಾಧೀನದಲ್ಲಿರುತ್ತಾನೆಂದರೆ ಸರಿ ಸಾಕ್ಷಿ ಮುಂದುವರೆದು ಜಂಟಿ ಪಹಣಿ ಇದೆ ಎನ್ನುತ್ತಾರೆ. ಸದರಿ ಜಮೀನಿನಲ್ಲಿಯೂ ಸಹಾ 10 ನೇ ಪ್ರತಿವಾದಿಯು ತೆಂಗಿನ ಮರಗಳನ್ನು ಹಾಕಿರುತ್ತಾರೆಂದರೆ ಸಾಕ್ಷಿಯು ಸದರಿ ಜಮೀನಿನ ಬದುವಿನ ಮೇಲೆ ಸುತ್ತಲೂ ತೆಂಗಿನ ಮರಗಳನ್ನು ಹಾಕಿಕೊಂಡಿರುತ್ತಾನೆ ಎನ್ನುತ್ತಾರೆ. ಸದರಿ ಆಸ್ತಿಯಲ್ಲಿ 10 ನೇ ಪ್ರತಿವಾದಿಯು ಸಂಪೂರ್ಣ ಸ್ವಾಧೀನದಲ್ಲಿರುವುದರಿಂದ ಅವರು ಆ ಜಮೀನಿನಲ್ಲಿ ತೆಂಗಿನ ಗಿಡಗಳನ್ನು ಬೆಳೆಸಿರುತ್ತಾರೆಂದರೆ ಸರಿ ಸಾಕ್ಷಿ ಮುಂದುವರೆದು ನಾವು ಮೌಖಿಕವಾಗಿ ಆಸ್ತಿ ಹಂಚಿಕೆ ಮಾಡಿಕೊಂಡಿರುತ್ತೇವೆನ್ನುತ್ತಾರೆ. ಮೌಖಿಕವಾಗಿ ವಿಭಾಗ ಮಾಡಿಕೊಂಡು ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಪ್ರಮಾಣಪತ್ರವನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ